ಊರಿಗೆಲ್ಲ ಸಂಭ್ರಮ. ಮದುವೆ ಹೆಣ್ಣಾದ ವಾಗ್ದೇವಿಗೆ ಮಾಫಿ. ಯಾವ ಕೆಲಸಕ್ಕೂ ಕೈ ಹಾಕುವ ಹಾಗಿಲ್ಲ. ಸುಮ್ಮನೆ ದಾವಣಿಯ ಸೆರಗನ್ನು ಹಾರಿಸುತ್ತ ಆಚೀಚೆ ತಿರುಗುವುದು ಮತ್ತು ಅವರೆಲ್ಲಾದರೂ ತುಂಟ ಮಾತುಗಳನ್ನು ಹೇಳಿದರೆ ಒಳಗೊಳಗೇ ಸುಖಿಸುತ್ತ ಹೊರಗಿನಿಂದ ಹುಸಿ ಮುನಿಸಿನ ನೋಟವನ್ನು ಹರಿಸುತ್ತ ಕನಸು ಕಾಣುವುದು.

ಮದುವೆ ಆಗಿತ್ತು ತೀರ ಸಂಭ್ರಮದಲ್ಲಿ. ಜೋಡು ವಾಲಗ. ಪಲ್ಲಕ್ಕಿ. ಪರ ಊರುಗಳಿಂದ ಬಂದ ಕಲಾಕಾರರು ಕಟ್ಟಿದ ಮದುವೆಯ ಮಂಟಪ. ಮುಂಡಾಸು ಸುತ್ತಿ ಮೇಲೆ ಬಾಸಿಂಗ ಕಟ್ಟಿ ಮಂಟಪದಲ್ಲಿ ಕುಳಿತು ಹೆಣ್ಣನ್ನು ಕರೆತರುವುದನ್ನು ಕಾಯುತ್ತಿದ್ದ ಗಂಡು ಥೇಟ್ ಶ್ರೀರಾಮ ಎಂದವರಿದ್ದರು ನೆರೆದವರಲ್ಲಿ. ಮದುವೆಯಾಗಿ ಗಂಡನ ಮನೆಗೆ ಹೋದದ್ದೂ ಅಷ್ಟೇ ಸಂಭ್ರಮದಲ್ಲಿ. ಸಂಸಾರ ಪ್ರಾರಂಭ ಮಾಡಿದ್ದೂ ಹೌದು. ಕಾರಂತರ ಮಗ ಎನ್ನುವ ಗೌರವ. ತೆಂಗಿನ ತೋಟವಲ್ಲದೆ ಹತ್ತಿಪ್ಪತ್ತು ಮುಡಿ ಗದ್ದೆ ಬೇರೆ ಇತ್ತಲ್ಲ. ಮನೆ ತುಂಬ ಕೆಲಸ ಮಾಡುವ ಜನಗಳು. ಅರೆವಾಸಿ ಜನರಿಗೆ ಮನೆಯಲ್ಲೇ ಊಟ. ಅತ್ತೆ ಅಡಿಗೆ ಮಾಡಿ ಬಡಿಸುವುದರಲ್ಲಿ ಎಕ್ಸ್‌ಪರ್ಟ್. ಐವತ್ತು ಎಡೆ ಅನ್ನದ ಚರಿಗೆಯನ್ನು ಒಬ್ಬಳೇ ಎತ್ತಿ ಬಸಿಯುವಷ್ಟು ಗಟ್ಟಿಗಿತ್ತಿ. ಸಾಲಾಗಿ ಕುಳಿತ ಜನರಿಗೆ ಒಂದೇ ಸಾರಿ ಬಡಿಸುವಷ್ಟು ಸಾಮರ್ಥ್ಯ. ಹೊಸ ಮದು ಮಗಳು ವಾಗ್ದೇವಿ ಅತ್ತೆಗೆ ಸರಿಕಟ್ಟಲು ಹೋಗಿ ಬಡಿಸಲು ನಿಂತರೆ ನಾಲ್ಕು ಬಾರಿ ಬೆನ್ನು ನೆಟ್ಟಗೆ ಮಾಡಿಕೊಳ್ಳಬೇಕಾಗಿತ್ತು. ವಯಸ್ಸಾದ ಅತ್ತೆಯ ಸಾಮರ್ಥ್ಯ ಕಂಡು ಅವಳಿಗೆ ಆಶ್ಚರ್ಯ. ತನಗೆ ಆ ಮಟ್ಟಕ್ಕೆ ಬರಲು ಸಾಧ್ಯವಾದೀತೇ ಎನ್ನುವ ಆತಂಕ. ಹಾಗಿದ್ದೂ ಅತ್ತೆಯೊಂದಿಗೆ ಕೆಲಸ ಮಾಡುವುದೆಂದರೆ ಅದೇನೋ ಸಂಭ್ರಮ. ಅತ್ತೆಯೂ ಅಷ್ಟೆ. ಸೊಸೆಯನ್ನು ಮಗಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಳು. ಬಹಳ ದಿನಗಳಿಂದ ಹೆಣ್ಣು ಮಕ್ಕಳ ಕಾಲ ಸಪ್ಪಳವಿಲ್ಲದಿದ್ದ ಮನೆಯಲ್ಲಿ ಈಗ ಹೆಣ್ಣಿನ ಗೆಜ್ಜೆಯ ಸದ್ದು ಸಂಗೀತದಂತೆ. ಇನ್ನು ಮಗುವೊಂದು ಬಂದಿತೆಂದರೆ ಇದೂ ಒಂದು ಮನೆಯಂತೆ ಆಗುತ್ತದೆ ಎಂದು ಹೇಳಿ ವಾಗ್ದೇವಿ ನಾಚುವಂತೆ ಮಾಡುತ್ತಿದ್ದಳು. ಅತ್ತೆಯ ಆಸೆಯನ್ನು ನಿಜಗೊಳಿಸಲೋ ಎನ್ನುವಂತೆ ವಾಗ್ದೇವಿ ಒಂದೇ ವರ್ಷದಲ್ಲಿ ಮಗುವನ್ನು ಹೆತ್ತು ಕೊಟ್ಟಿದ್ದಳು. ಮುಂದೆ ಇನ್ನೊಂದು ವರ್ಷದಲ್ಲಿ ಇನ್ನೊಂದು. ಅತ್ತೆಗೆ ಸಂಭ್ರಮವೋ ಸಂಭ್ರಮ. ಕೈಗೊಂದು ಕಾಲಿಗೊಂದು ಆಳನ್ನು ಇಟ್ಟುಕೊಳ್ಳುವ ತಾಕತ್ತಿದ್ದ ಅತ್ತೆ ಬಾಣಂತನಕ್ಕೆ ಸೊಸೆಯನ್ನು ತವರಿಗೆ ಕಳಿಸಲು ಒಪ್ಪಲೇ ಇಲ್ಲ. ತಾನೇ ಎರಡೂ ಬಾಣಂತನವನ್ನು ಮುಗಿಸಿದ್ದಳು.

★★★

ಮಕ್ಕಳು ಅಮ್ಮ ಮತ್ತು ಅಜ್ಜಿಯ ಆರೈಕೆಯಲ್ಲಿ ಏಳುತ್ತ ಬೀಳುತ್ತ ನಡೆಯಲು ಕಲಿಯುತ್ತಿದ್ದ ಕಾಲದಲ್ಲಿಯೇ ಭೂ ಸುಧಾರಣೆಯ ಕಾಯ್ದೆ ಬಂದದ್ದು. ಕಾಲ ಕಾಲದಿಂದ ಗೇಣಿಗೆ ಕೊಟ್ಟ ಗದ್ದೆಗಳು. ಕೆಲವನ್ನು ಸ್ವಂತಕ್ಕೆ ಮಾಡಲಿಕ್ಕಾಗದೆ ಕೊಟ್ಟದ್ದು. ಹತ್ತಿರದ ಫಲವತ್ತಾದ ಗದ್ದೆಗಳನ್ನು ಅವರಿವರು ಬಂದು ಕಣ್ಣೀರುಗರೆದದ್ದಕ್ಕೆ, 'ಬಡವರು ಬದುಕಿಕೊಳ್ಳುತ್ತೇವಯ್ಯ' ಎಂದು ಗೋಗರೆದದ್ದಕ್ಕೆ ಕೊಟ್ಟದ್ದು. ದಾಖಲೆಯಿದ್ದವು ಇಲ್ಲದವು ಎಲ್ಲಾ ಹೋಗಿದ್ದುವು. ನೂರೈವತ್ತು ತೆಂಗಿನ ಮರಗಳ ತೋಟ ಸ್ವಂತ ಉಸ್ತುವಾರಿಯಲ್ಲಿಯೇ ಇದ್ದುದರಿಂದ ಉಳಿದುಕೊಂಡಿತ್ತು. ಆರೋಗ್ಯ ಆಗಲೇ ಕೆಡಲಿಕ್ಕೆ ಪ್ರಾರಂಭಿಸಿದ್ದ ಮಾವ ಈ ಆಘಾತವನ್ನು ತಡೆಯಲಾರದೇ ಕೊನೆಯುಸಿರೆಳೆದಿದ್ದರು. ಕೆಲವೇ ದಿನಗಳಲ್ಲಿ ಅತ್ತೆಯೂ. ಈಗ ವಾಗ್ದೇವಿ ಮತ್ತು ಗಂಡನ ಸಂಸಾರ. ಮಕ್ಕಳು ಇನ್ನೂ ಚಿಕ್ಕವರು. ಅಪ್ಪ ಇದ್ದಾಗ ಹೊರದಿದ್ದ ಜವಾಬ್ದಾರಿ ಅಪ್ಪ ಸತ್ತರೆಂದ ಕೂಡಲೇ ಬಂದು ಬಿಡುತ್ತದೆಯೇ. ಅಪ್ಪ ಇದ್ದಾಗ ಕನಿಷ್ಠ ಹಿಂದಿನ ಬಾಗಿಲಿನಿಂದ ಹೋಗಿ ಅದೇ ಬಾಗಿಲಿನಿಂದ